**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮಾಗಡಿ.**
**ಓ ಎಸ್ ನಂಃ 144/14**
**ಡಿ ಡಬ್ಲೂ ಃ 1**

**ಹೆಸರು** ಃ ಗಂಗಾಂಭಿಕ
ಗಂಡನ ಹೆಸರು ಃ ರಾಜಣ್ಣ
**ಉದ್ಯೋಗ** ಃ ಗೃಹಿಣಿ
**ವಯಸ್ಸು** ಃ 63 **ವರ್ಷ**
**ವಾಸ** ಃ ಪ್ರಶಾಂತ ನಗರ, ಬೆಂಗಳೂರು

**ದಿಃ 11-12-2019 ರಂದು ಸಾಕ್ಷಿಯನ್ನು ಕರೆಯಿಸಿ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ** ಪ್ರತಿವಾದಿ 1 ರಿಂದ 3, 5 ರಿಂದ 7 ಮತ್ತು 15 ಪರ ಶ್ರೀ. ಜಿ ಪಿ ವಕೀಲರಿಂದ.

1. ನಾನು ಶಿವರುದ್ರಯ್ಯ ಮತ್ತು ಪಾರ್ವತಮ್ಮರವರ 6ನೇ ಮಗಳು. 2ನೇ ವಾದಿ ಶಿವರುದ್ರಯ್ಯ ಮತ್ತು ಪಾರ್ವತಮ್ಮರವರ 7ನೇ ಮಗಳು. ನಾವಿಬ್ಬರೂ ವಕೀಲರ ಕಛೇರಿಗೆ ಹೋಗಿ ಬರೆಸಿರುತ್ತೇವೆ. ವಾದ ಪತ್ರಕ್ಕೆ ನಾನು ಕೂಡ ಸಹಿ ಮಾಡಿರುತ್ತೇನೆ. 2ನೇ ವಾದಿಗೆ ವಿಚಾರಣೆ ಕೊಡಲು ನಾನು ಅಧಿಕಾರ ಪತ್ರ ಕೊಟ್ಟಿಲ್ಲ. ನನಗೆ ನನ್ನ ತಂದೆಯ ಸಹಿಯನ್ನು ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಹಣ ಸಂದಾಯ ರಸೀದಿಯಲ್ಲಿ ಸಹಿ ತಂದೆಯ ಸಹಿ ಇದೆಯಾ ಎಂದು ಗುರುತಿಸಲು ತೋರಿಸಿದಾಗ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮಾಗಡಿ ಪಿ ಎನ್ ಡಿ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದರಾ ಎಂದು ನನಗೆ ಗೊತ್ತಿಲ್ಲ. ಪ್ರಾಸ 1ರವರ ಬಳಿ ಈ ಕೇಸಿನಲ್ಲಿ ವಿಚಾರಣೆ ಕೊಟ್ಟಿರುವುದನ್ನು ಸ್ವಲ್ಪ ಕೇಳಿ ತಿಳಿದುಕೊಂಡಿದ್ದೇನೆ. ಪ್ರಾಸ 1ರವರ ವಿಚಾರಣೆಯನ್ನು ಸದರಿ ಸಾಲದ ಬಗ್ಗೆ ಕೇಳಿರುವುದರಿಂದ ಪಿ ಎನ್ ಡಿ ಬ್ಯಾಂಕ್ ನಲ್ಲಿ ಆ ಬಗ್ಗೆ ವಿಚಾರಣೆ ನಾನು ಮಾಡಿರುವುದಿಲ್ಲ. ದಿನಾಂಕಃ 05-12-1981ರ ವಿಲ್ ಯಾ ಮರಣ ಶಾಸನ ಪತ್ರವನ್ನು ಕೇಸಿನ ಕಡತದಿಂದ ತೆಗೆದು ಅದರಲ್ಲಿ ತಂದೆಯ ಸಹಿ ಇದೆಯಾ ಎಂದು ಗುರುತಿಸಲು ತೋರಿಸಿದಾಗ ಅದರ

ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಮರಣ ಶಾಸನದ ಬಗ್ಗೆ ಪ್ರಾಸ 1ರವರಲ್ಲಿ ನಾನು ಪ್ರಸ್ತಾಪ ಮಾಡಿರುವುದಿಲ್ಲ. ಸದರಿ ಮರಣ ಶಾಸನವನ್ನು ನನ್ನ ತಂದೆ ಬರೆದೇ ಇಲ್ಲ. ನನಗೆ 2 ವರ್ಷಗಳಿಂದ ಅಕ್ಷರ ಕಾಣಿಸದೇ ಇರುವುದರಿಂದ ಮರಣ ಶಾಸನವನ್ನು ಓದಲಾಗುವುದಿಲ್ಲ. ನಾನು ಆ ಬಗ್ಗೆ ಕನ್ನಡಕವನ್ನು ಇಟ್ಟುಕೊಂಡಿದ್ದೇನೆ. ಈ ದಿನ ಅದನ್ನು ತಂದಿರುವುದಿಲ್ಲ. ನನಗೆ ಅದನ್ನು ತರಲು ಆಗುವುದಿಲ್ಲ. ಕನ್ನಡಕವನ್ನು ಹಾಕಿಕೊಂಡರೆ ಓದಬಹುದು. ನನ್ನ ಮದುವೆಯನ್ನು ನನ್ನ ತಂದೆ

1974 ರಲ್ಲಿ ಮಾಡಿರುತ್ತಾರೆ. ನನ್ನ ಗಂಡ ಫಾರ್ಮಸಿಸ್ಟ್ ಆಗಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ನಿವೃತ್ತರಾಗಿರುತ್ತಾರೆ. ನನ್ನ ತಂದೆ ಮದುವೆ ಕಾಲಕ್ಕೆ ಏನನ್ನೂ ನನಗೆ ಮತ್ತು ನನ್ನ ಯಜಮಾನರಿಗೆ ಕೊಟ್ಟಿರುವುದಿಲ್ಲ. ಪ್ರಶಾಂತನಗರದಲ್ಲಿರುವ ಸೈಟ್ ನ್ನು ಕೊಂಡುಕೊಳ್ಳಲು ಎಷ್ಟು ಹಣ ನನ್ನ ತಂದೆ ಸಹಾಯ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಮದುವೆ ಮುಂಚೆಯೇ 1973 ರಲ್ಲಿ ನನ್ನ ಗಂಡ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಅದರ ಬಗ್ಗೆ ದಾಖಲೆ ಇದ್ದು ಅದನ್ನು ಹಾಜರುಪಡಿಸಬಲ್ಲೆ. ನನ್ನ ಅಣ್ಣಂದಿರ ಬಳಿ ನಾನು ಹಣ ಕೇಳಿರುವುದಿಲ್ಲ. 1995 ರಲ್ಲಿ ನಾನು ರೂ.50,000/-ಗಳನ್ನು ಪಡೆದಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಪ್ರತಿವಾದಿ 1 ರಿಂದ 3, 5 ರಿಂದ 7 ಹಾಗೂ 15 ರ ಪರ ವಕೀಲರು ವಿನಂತಿಸಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3, 5 ರಿಂದ 7 ಮತ್ತು 15 ಪರ ಶ್ರೀ. ಜಿ ಪಿ ವಕೀಲರಿಂದ.

2. ಕೇತೋಹಳ್ಳಿ ಗ್ರಾಮದ ರುದ್ರಯ್ಯರವರ ಮಗ ಶಿವರುದ್ರಯ್ಯ ಎಂದರೆ ನನ್ನ ತಂದೆ ಎಂದರೆ ಸರಿ. ಸದರಿ ಶಿವರುದ್ರಯ್ಯರವರ ಒಬ್ಬಳೆ ಹೆಂಡತಿ ಪಾರ್ವತಮ್ಮ ಎಂದರೆ ನನ್ನ ತಾಯಿ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಅಕ್ಕ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಗಂಡ ಸರ್ಕಾರಿ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಅವರಿಗೂ ನನ್ನ ತಂದೆಗೆ ಒಡವೆಗಳನ್ನು ಕೊಟ್ಟು ಮದುವೆ ಮಾಡಿಸಿದರು ಎಂದರೆ ಸರಿಯಲ್ಲ. ಆ ಮದುವೆ ಸಮಯದಲ್ಲಿ 4 ವರ್ಷದ ಹುಡುಗಿ ಇರಬಹುದು. ಆಗಾಗಿ ಆ ಮದುವೆ ಬಗ್ಗೆ ನನಗೆ ಗೊತ್ತಿರಲ್ಲ ಎಂದರೆ ಸರಿ.

3. 3 ನೇ ಪ್ರತಿವಾದಿಯನ್ನು ಬ್ಯಾಲಕೆರೆ ವೀರಭದ್ಯಯ್ಯರವರಿಗೆ ಮದುವೆ ಮಾಡಿಕೊಟ್ಟಿದ್ದು ಎಂದರೆ ಆಗ ನಾನು ಚಿಕ್ಕ ಹುಡುಗಿ ಎಂದು ನುಡಿಯುತ್ತಾರೆ. ಸದರಿ ವೀರಭದ್ರಯ್ಯ ಅಂಗಡಿ ಇಟ್ಟಿದ್ದರು ಎಂದರೆ ಸರಿ. ಅವರಿಗೆ ಯಾವುದೇ ಜಮೀನು ಇರಲಿಲ್ಲ ಎಂದರೆ ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆನೆ ಅವರಿಗೆ ಅಂಗಡಿ ಇಡಲು ಹಣಕಾಸು ಸಹಾಯ ಮಾಡಿರುವುದು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಪಾಶ್ವವಾಯು ಪೀಡಿತರಾಗಿದ್ದರಿಂದ ಅವರ ಮಕ್ಕಳನ್ನು ಮತ್ತು ವೀರಭದ್ರಯ್ಯರವರನ್ನು ನನ್ನ ತಂದೆ ಕರೆದುಕೊಂಡು ಬಂದು ನನ್ನ ತಂದೆ ಸಾಕಿರುತ್ತಾರೆ ಎಂದರೆ ಸಾಕ್ಷಿ 2 ಚಿಕ್ಕ ಮಕ್ಕಳನ್ನು ಮಾತ್ರ ಕರೆದುಕೊಂಡು ಬಂದು ಸಾಕಿರುತ್ತಾರೆ ಎಂದು ನುಡಿಯುತ್ತಾರೆ.

4. 4 ನೇ ಪ್ರತಿವಾದಿ ಮದುವೆಯಾದಾಗ ನಾನು 9 ವರ್ಷದ ಹುಡುಗಿ ಎಂದು ನುಡಿಯುತ್ತಾರೆ. ಮದುವೆ ಸಂದರ್ಭದಲ್ಲಿ 4 ನೇ ಪ್ರತಿವಾದಿಗೆ ಒಡವೆ ವಸ್ತ್ರಗಳನ್ನು ಕೊಟ್ಟಿಲ್ಲ. ಆ ಸಮಯದಲ್ಲಿ ನನಗೆ ಲೋಕಜ್ಞಾನ ಇತ್ತು. ಯಾರ್ಯಾರಿಗೆ ಏನೇನು ಮದುವೆ ಸಂದರ್ಭದಲ್ಲಿ ಕೊಟ್ಟಿದ್ದಾರೆ ಎಂದು

ಖುದ್ದಾಗಿ ಗೊತ್ತಿದ್ದಿಯಾ ಎಂದರೆ ಸಾಕ್ಷಿ ಯಾರಿಗೂ ಏನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

5. 4 ನೇ ಪ್ರತಿವಾದಿ ಮತ್ತು ಅವರ ಮಕ್ಕಳನ್ನು 6 ನೇ ಪ್ರತಿವಾದಿಯೇ ಅವರ ಮನೆಯಲ್ಲಿ ಸಾಕುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ಹೆಣ್ಣು ಮಕ್ಕಳಿಗೂ ಒಡವೆ ವಸ್ತ್ರಗಳನ್ನು ಮದುವೆ ಸಂದರ್ಭದಲ್ಲಿ ಕೊಟ್ಟಿದ್ದರು ಎಂದರೆ ಯಾರಿಗೂ ಏನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಗಂಡಂದಿಗೆ ಉಡುಗೊರೆಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು 1974 ರಲ್ಲಿ ಮದುವೆ ನಂತರ ಗಂಡನ ಮನೆಯಲ್ಲಿ ವಾಸ ಇರುವುದು ಎಂದರೆ ಸರಿ. ಅದೇ ರೀತಿ 4 ನೇ ಪ್ರತಿವಾದಿ ಬಿಟ್ಟು ಉಳಿದ ಹೆಣ್ಣು

ಮಕ್ಕಳು ಅವರವರ ಗಂಡನ ಮನೆಯಲ್ಲಿ ವಾಸವಿರುವುದು ಎಂದರೆ ಸಾಕ್ಷಿ 2 ನೇ ವಾದಿ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ.

6. ನನ್ನ ಮದುವೆ ನನ್ನ 18-19 ನೇ ವರ್ಷದಲ್ಲಿ ಆಗಿರುತ್ತದೆ. ನನ್ನ ತಂದೆ ನನ್ನ ಮುಂದೆ ರುಜು ಮಾಡಿರುವುದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನನ್ನ ತಂದೆ ಯಾರಿಗೂ ರುಜು ಮಾಡಿರುವುದಿಲ್ಲ. ನನ್ನ ಈ ಅವಧಿ ತನಕ ನನ್ನ ತಂದೆಯ ರುಜುವನ್ನು ಗುರುತಿಸಲು ಆಗುವುದಿಲ್ಲ. ನನ್ನ ಅಕ್ಕ ತಂಗಿಯರ ರುಜುಗಳನ್ನು ಕೂಡ ಗುರುತಿಸಲು ಆಗುವುದಿಲ್ಲ.

ಪಾಟೀ ಸವಾಲುಃ ಮಧ್ಯಾಹ್ನದ ಅವಧಿಯ ಸಮಯವು ಮುಗಿದಿರುವುದರಿಂದ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಧೀಶರು,**
**ಮಾಗಡಿ.**